Reg. No. | | | | | | | | | |

**BCAKAL 153/BSAKAL 153/BFDKAL 155/BGDKAL 155/BIDKAL 155**

# ಗುಣಾಂಕ ಆಧಾರಿತ ದ್ವಿತೀಯ ಸೆಮಿಸ್ಟರ್ ಬಿ.ಸಿ.ಎ./ಬಿ.ಎಸ್ಸಿ. (ಅನಿಮೇಷನ್ ಮತ್ತು ವಿಶುವಲ್ ಇಫೆಕ್ಟ್ಸ್)/ಬಿ.ಎಸ್ಸಿ. (ಫ್ಯಾಶನ್ ಡಿಸೈನ್)/ಬಿ.ಎಸ್ಸಿ. (ಗಾರ್ಮೆಂಟ್ಸ್ ಡಿಸೈನ್)/ಬಿ.ಎಸ್ಸಿ. (ಇಂಟೀರಿಯರ್ ಡಿಸೈನ್ ಮತ್ತು ಡೆಕೊರೇಟಿಂಗ್) ಪದವಿ ಪರೀಕ್ಷೆ, ಎಪ್ರಿಲ್/ಮೇ 2015

**(ಹೊಸ ಪಠ್ಯಕ್ರಮ)**

**ಕನ್ನಡ/ಅಡ್ವಾನ್ಸ್‌ಡ್ ಕನ್ನಡ – II**

**(2013-2014 Batch and Onwards)**

ಸಮಯ : 3 ಗಂಟೆಗಳು | ಗರಿಷ್ಠಾಂಕಗಳು : 80

## ಭಾಗ – 1 (ಕಾವ್ಯ)

I. ಅ) ಕೆಳಗಿನವುಗಳಲ್ಲಿ **ಒಂದು** ಪ್ರಶ್ನೆಗೆ ಉತ್ತರಿಸಿ : **(1×8=8)**

1) ಕೈಕೆಯ ವ್ಯಕ್ತಿತ್ವವನ್ನು 'ಅನೃತದಿಂದ ಮಗ್ಗಳಮುಂಟೆ' ಕಾವ್ಯ ಭಾಗದ ಹಿನ್ನೆಲೆಯಲ್ಲಿ ವಿವರಿಸಿರಿ.

2) ದಾಸಿಮಯ್ಯನ ವಚನಗಳು ಮನುಷ್ಯನ ಬದುಕಿಗೆ ನೀಡುವ ಸಂದೇಶವೇನು ? ವಿಶ್ಲೇಷಿಸಿರಿ.

ಆ) ಕೆಳಗಿನವುಗಳಲ್ಲಿ **ಒಂದು** ಪ್ರಶ್ನೆಗೆ ಉತ್ತರಿಸಿರಿ : **(1×5=5)**

1) ಕೃಷ್ಣ ಈರುಳ್ಳಿಯನ್ನು ಸೃಷ್ಟಿ ಮಾಡಿದ ಸನ್ನಿವೇಶದ ಸ್ವಾರಸ್ಯವನ್ನು ಕುರಿತು ಬರೆಯಿರಿ.

2) ಮನುಷ್ಯನ ಬಾಳನ್ನು ತಿದ್ದುವ ಪ್ರಯತ್ನವನ್ನು ಡಿ.ವಿ.ಜಿ. ಯವರು ತಮ್ಮ ಮುಕ್ತಕಗಳ ಮೂಲಕ ಮಾಡಿರುವ ಪರಿಯನ್ನು ವಿವರಿಸಿರಿ.

ಇ) **ಎರಡಕ್ಕೆ** ಟಿಪ್ಪಣಿ ಬರೆಯಿರಿ : **(2×3=6)**

1) ನಾಗಚಂದ್ರ

2) ತವರಿನ ಹಂಬಲ

3) ದ್ರೌಪದಿ.

II. ಅ) **ಒಂದು** ಪದ್ಯ ಭಾಗದ ಸಂದರ್ಭ ಸೂಚಿಸಿ ಮಹತ್ವವನ್ನು ವಿವೇಚಿಸಿರಿ : **(1×5=5)**

1) ಸಡೆದನೆ ತನ್ನ ಬಂಧುಗಳಗಲ್ಕೆಗೆ ಪುತ್ರ ಕಳತ್ರ ಮೋಹ ದೊ
ಳ್ತೊಡರ್ದನೆ ಪಟ್ಟಬಂಧಮನೊಡರ್ಬಿದನೇ ಭರತಂಗೆ ರಾಘವಂ
ನಡೆಯೇ ಬನಕ್ಕದಂ ಮಱೆದುಮೇಂ ಪೆಸರ್ಗೊಂಡನೆ ದೀಕ್ಷೆಗೊಂಡನಾ
ಗಡೆ ವಿಭು ಸರ್ವಭೂತ ಹಿತ ದಿವ್ಯ ಮುನೀಶ್ವರ ಪಾದಪದ್ಮದೊಳ್.

2) ಮರದೊಳಗೆ ಮಂದಾಗ್ನಿಯಂ ಉರಿಯದಂತಿರಿಸಿದೆ
ನೊರೆವಾಲೊಳಗೆ ತುಪ್ಪವ ಕಂಪಿಲ್ಲದಂತಿರಿಸಿದೆ
ಶರೀರದೊಳಗಾತ್ಮನನಾರೂ ಕಾಣದಂತಿರಿಸಿದೆ
ನೀನು ಬೆರಸಿದ ಭೇದಕ್ಕೆ ಬೆರಗಾದೆನಯ್ಯಾ ರಾಮನಾಥ.

ಆ) **ಎರಡು** ಸಾಲುಗಳಿಗೆ ಸಂದರ್ಭ ಸೂಚಿಸಿ ಸ್ವಾರಸ್ಯವನ್ನು ವಿಶದಪಡಿಸಿರಿ : **(2×3=6)**

1) ನನ್ನ ಕಷ್ಟಕ್ಕೆ ಕೊನೆಯಿಲ್ಲ.
2) ತಾಯಿಯಿದ್ದರೆ ಸಂಪತ್ತು ಹೆಣ್ಣಿಗೆ.
3) ಬಳಸುವನೆಲ್ಲ, ಉಳಿಸುವುದಿಲ್ಲ ತನ್ನ ಹಿತಕಾಗಿ ಹೋರಾಡುವ.

III. ಕೆಳಗಿನ ಪ್ರಶ್ನೆಗಳಲ್ಲಿ ಪ್ರತಿಯೊಂದಕ್ಕೂ **ಒಂದೊಂದು** ವಾಕ್ಯದಲ್ಲಿ ಉತ್ತರಿಸಿ : **(5×1=5)**

1) 'ಅಭಿನವ ಪಂಪ' ಎಂಬ ಹೆಸರು ಯಾರಿಗಿದೆ ?
2) ದಾಸಿಮಯ್ಯನ ಮಡದಿಯ ಹೆಸರೇನು ?
3) ಡಿ.ವಿ.ಜಿ. ಯವರು ರಚಿಸಿದ ಕೃತಿಗಳು ಯಾವುವು ?
4) 'ಜನವಾಣಿ ಬೇರು, ಕವಿವಾಣಿ ಹೂವು' ಎಂದವರು ಯಾರು ?
5) 'ಮೌನ ಕರಗುವ ಹೊತ್ತು' ಈ ಕೃತಿಯನ್ನು ಬರೆದವರು ಯಾರು ?

## ಭಾಗ – 2 (ಗದ್ಯ)

IV. ಅ) ಕೆಳಗಿನವುಗಳಲ್ಲಿ **ಒಂದು** ಪ್ರಶ್ನೆಗೆ ಉತ್ತರಿಸಿರಿ : **(1×8=8)**

1) 'ನಮ್ಮೂರ ಕೆರೆ' ಪ್ರಬಂಧದ ಸ್ವಾರಸ್ಯವನ್ನು ವಿವರಿಸಿ.
2) ಗಿಡಗಂಟಿಗಳು ಓಗೊಡುವಂತೆ ಪ್ರಬಂಧದಲ್ಲಿರುವ ಪುರಾಣದ ವಿಚಾರಗಳನ್ನು ವಿಶ್ಲೇಷಿಸಿರಿ.

ಆ) ಕೆಳಗಿನವುಗಳಲ್ಲಿ **ಒಂದು** ಪ್ರಶ್ನೆಗೆ ಉತ್ತರಿಸಿರಿ : **(1×8=8)**

1) 'ಪ್ರಕೃತಿಯೊಂದಿಗೆ ಅನುಸಂಧಾನ' ಪ್ರಬಂಧದಲ್ಲಿ ಅಡಕವಾಗಿರುವ ನಾ. ಡಿಸೋಜ ಅವರ ಪರಿಸರ ಪ್ರಿಯತೆಯನ್ನು ವಿವರಿಸಿ.
2) ಪುರುಷರ ದೌರ್ಜನ್ಯದ ವಿರುದ್ಧಪ್ರತಿಭಟನೆಯ ಧ್ವನಿ 'ಜೀವಪರದೊಂದಿ' ಪ್ರಬಂಧದಲ್ಲಿ ಪ್ರಕಟವಾಗಿರುವ ರೀತಿಯನ್ನು ಕುರಿತು ಬರೆಯಿರಿ.

V. ಕೆಳಗಿನವುಗಳಲ್ಲಿ **ಒಂದು** ಪ್ರಶ್ನೆಗೆ ಉತ್ತರಿಸಿರಿ : **(1×5=5)**

1) ಮನುಷ್ಯನು ಪ್ರಯತ್ನದಿಂದಾಗಿ ಯಶಸ್ಸನ್ನು ಗಳಿಸಿಕೊಳ್ಳುತ್ತಾನೆಂಬ ವಿಚಾರವನ್ನು 'ಗಣೇಶ ಅಮೀನಗಡ' ಹೇಗೆ ವಿಶ್ಲೇಷಿಸಿದ್ದಾರೆ ?

2) ಕುಮಾರವ್ಯಾಸನ ಷಟ್ಪದಿಗಳ ಸ್ವಾರಸ್ಯವನ್ನು 'ಜೋಗಿ' ಯವರು ಅಭಿವ್ಯಕ್ತಗೊಳಿಸಿರುವ ಪರಿಯನ್ನು ವಿವೇಚಿಸಿ ಬರೆಯಿರಿ.

VI. ಕೆಳಗಿನ ಪ್ರಶ್ನೆಗಳಿಗೆ **ಒಂದೊಂದು** ವಾಕ್ಯದಲ್ಲಿ ಉತ್ತರಿಸಿ : **(4×1=4)**

1) ಶಿವರಾಮ ಕಾರಂತರ ಜನ್ಮಸ್ಥಳ ಯಾವುದು ?

2) 'ಮುಳುಗಡೆ' ಇದು ಯಾರು ಬರೆದ ಕಾದಂಬರಿ ?

3) 'ಭಗವಾನ್ ಬುದ್ಧ'ನ ಮೂಲ ಹೆಸರೇನು ?

4) 'ಕರ್ಣಾಟ ಭಾರತ ಕಥಾಮಂಜರಿ' ಯನ್ನು ಬರೆದವರು ಯಾರು ?

**ಭಾಗ – 3 (ನಾಟಕ)**

VII. ಅ) ಕೆಳಗಿನವುಗಳಲ್ಲಿ **ಒಂದು** ಪ್ರಶ್ನೆಗೆ ಉತ್ತರಿಸಿರಿ : **(1×8=8)**

1) ಹರಿಶ್ಚಂದ್ರನಿಗೆ ಒದಗಿದ ಶಾಪ ಮತ್ತು ಅದಕ್ಕೆ ಕಾರಣವಾದ ಸನ್ನಿವೇಶವನ್ನು ವಿವರಿಸಿರಿ.

2) ಅಜೀಗರ್ತ ಮತ್ತು ವಸುಂಧರೆಯರ ಪಾತ್ರವನ್ನು ನಾಟಕದ ಹಿನ್ನೆಲೆಯಲ್ಲಿ ವಿವರಿಸಿರಿ.

ಆ) ಈ ಕೆಳಗಿನವುಗಳಲ್ಲಿ **ಒಂದು** ಪ್ರಶ್ನೆಗೆ ಉತ್ತರಿಸಿರಿ : **(1×6=6)**

1) ಶುನಶ್ಯೇಪನು ಬಲಿಪಶುವಾಗಲು ಒಪ್ಪಿದ ಸಂದರ್ಭವನ್ನು ಅದಕ್ಕೆ ಕಾರಣವಾದ ಪ್ರಸಂಗವನ್ನು ಕುರಿತು ಬರೆಯಿರಿ.

2) ಆಂದ್ರಕ, ಮದುಚ್ಛಂದರ ಪಾತ್ರಗಳನ್ನು ವಿಶ್ಲೇಷಿಸಿರಿ.

VIII. **ಎರಡು** ವಾಕ್ಯಗಳಿಗೆ ಸಂದರ್ಭ ಸೂಚಿಸಿ ಸ್ವಾರಸ್ಯವನ್ನು ವಿಶದಪಡಿಸಿರಿ. **(2×2=4)**

1) ನಿನ್ನ ಪರಿಚಯದಿಂದ ನಮಗೇನಾಗಬೇಕಾಗಿದೆ ?

2) ಸಾಯುವುದಾದರೂ ಜೊತೆಗೆ ಸಾಯೋಣ.

3) ಸಾಹಸದ ಪ್ರತಿಮೂರ್ತಿಯಾಗಿ ವಿಶ್ವ ದಾಖಲೆಯಾಗಿದೆ.

IX. ಕೆಳಗಿನ ಪ್ರಶ್ನೆಗಳಲ್ಲಿ **ಪ್ರತಿಯೊಂದಕ್ಕೂ ಒಂದೊಂದು** ವಾಕ್ಯದಲ್ಲಿ ಉತ್ತರಿಸಿರಿ : **(2×1=2)**

1) 'ಧರ್ಮಾರಣ್ಯ' ಎಂದರೆ ಏನು ?

2) ಯೂಪಸ್ತಂಭ ಈ ಪದದ ಅರ್ಥವೇನು ?

---